ಸಂಖ್ಯೆ:ಗ್ರಾಅಪ:13:ಸಾಪನಿ(ಉಖಾಯೋ)2014 ದಿನಾಂಕ:20-09-2014

**ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯದಲ್ಲಿ (ಮಹಾತ್ಮಗಾಂಧಿ ನರೇಗಾ), ಗ್ರಾಮೀಣಾಭಿವೃಧ್ಧಿ ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು ಇಲ್ಲಿ ರಾಜ್ಯ ಸಂಪನ್ಮೂಲ ವ್ಯಕ್ತಿಗಳ ಹುದ್ದೆ ನೇಮಕಾತಿಗಾಗಿ ಅರ್ಜಿ ಆಹ್ವಾನ ಪ್ರಕಟಣೆ.**

ಭಾರತ ಸರ್ಕಾರವು ಹೊರಡಿಸಿರುವ ದಿನಾಂಕ:30-06-2011ರ ಸಾಮಾಜಿಕ ಪರಿಶೋಧನಾ ನಿಯಮಗಳು 2011ರಡಿಯಲ್ಲಿ, ಕರ್ನಾಟಕ ಸರ್ಕಾರವು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಸಾಮಾಜಿಕ ಪರಿಶೋಧನಾ ನಿಯಮಾವಳಿಗಳನ್ನು ರೂಪಿಸಿ, ದಿನಾಂಕ:10-01-2012ರಂದು ಗ್ರಾಮೀಣಾಭಿವೃಧ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಅಧಿಸೂಚನೆ ಹೊರಡಿಸಲಾಗಿರುತ್ತದೆ. ಈ ಕಾಯ್ದೆ ನಿಯಮಗಳನ್ನು ಸಾಮಾಜಿಕ ಪರಿಶೋಧನೆ ಅನುಷ್ಠಾನಗೊಳಿಸಲು ಕರ್ನಾಟಕ ರಾಜ್ಯ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಸಾಮಾಜಿಕ ಪರಿಶೋಧನಾ ಸಂಘ ಬೆಂಗಳೂರು ರಚಿತವಾಗಿದೆ. ಸಾಮಾಜಿಕ ಪರಿಶೋಧನೆಗಾಗಿ ರಾಜ್ಯ ಸಂಪನ್ಮೂಲ ವ್ಯಕ್ತಿಗಳ ಹುದ್ದೆ ಗುರುತಿಸಲ್ಪಟ್ಟಿದೆ. ಸದರಿ ಹುದ್ದೆಗಳ ನೇಮಕಾತಿಗಾಗಿ ಸರ್ಕಾರಗಳ ಅಪರ ಮುಖ್ಯ ಕಾರ್ಯದರ್ಶಿಗಳು ಗ್ರಾಮೀಣಾಭಿವೃಧ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿರುತ್ತದೆ.

ರಾಜ್ಯ ಸಂಪನ್ಮೂಲ ಹುದ್ದೆಗಾಗಿ ಈ ಕೆಳಕಂಡ ನಿಬಂಧನೆಗಳನ್ವಯ, ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ರಾಜ್ಯ ಸಂಪನ್ಮೂಲ ವ್ಯಕ್ತಿಯ ಹುದ್ದೆಗಳು ತಾತ್ಕಾಲಿಕವಾಗಿದ್ದು, ಪ್ರಥಮವಾಗಿ ಒಂದು ವರ್ಷದ ಅವಧಿಯದ್ದಾಗಿರುತ್ತದೆ, ನಂತರದ ಅವಧಿ ತೃಪ್ತಿಕರ ಸೇವೆ ಆಧಾರದ ಮೇಲೆ ನವೀಕರಿಸಲಾಗುವುದು ಮತ್ತು ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲಾಗುವುದು. ಇದು ಸರ್ಕಾರಿ ಸೇವೆ ಆಗಿರುವುದಿಲ್ಲ.

**ಅ) ಹುದ್ದೆಗಳ ಸಂಖ್ಯೆ:** 05

**ಆ) ವಯಸ್ಸಿನ ಅರ್ಹತೆಗಳು:**

1) 60 ವರ್ಷದೊಳಗಿರತಕ್ಕದ್ದು.
2) ಹುದ್ದೆಯ ಹೊಣೆಗಾರಿಕೆ ನಿರ್ವಹಿಸುವಷ್ಟು ದೈಹಿಕ ಸಾಮರ್ಥ್ಯದ ಧೃಡೀಕರಣ ಪತ್ರ ಸಲ್ಲಿಕೆ ಕಡ್ಡಾಯವಾಗಿರುತ್ತದೆ.

**ಇ) ಶೈಕ್ಷಣಿಕ ಅರ್ಹತೆಗಳು:**

1) ಅಂಗೀಕೃತ ವಿಶ್ವವಿದ್ಯಾಲಯದ ಸ್ನಾತಕೋತರ ಪದವಿ ಮತ್ತು ಕಂಪ್ಯೂಟರ್ ಬಳಕೆ ಬಗ್ಗೆ ಜ್ಞಾನ.

**ಈ) ಸ್ಥಳಿಯ ಭಾಷೆ ಜ್ಞಾನ ಕಡ್ಡಾಯ.**

**ಉ) ಅಪೇಕ್ಷಣೀಯ ಅನುಭವ:**

1. ಸಾಮಾಜಿಕ ಪರಿಶೋಧನೆ ನಿರ್ವಹಿಸಿದ ಅನುಭವ.
2. ಸ್ವಯಂ ಸೇವಾ ಸಂಘ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸಿದ ಅನುಭವ.
3. ನರೇಗಾ ಕಾರ್ಯಕ್ರಮದ ಅನುಭವ.

**ಊ) ಅಭ್ಯರ್ಥಿಗಳಿಗೆ Weightage ನೀಡುವ ಸಂದರ್ಭಗಳು:**

1) ಜಿಲ್ಲಾ ಸಾಮಾಜಿಕ ಪರಿಶೋಧನಾ ಸಂಯೋಜಕರಿಗೆ ಪ್ರತಿ ವರ್ಷಕ್ಕೆ 02 ಅಂಕಗಳು ಗರಿಷ್ಟ 8 ಅಂಕಗಳು.

ಋ) ಆದ್ಯತೆಗಳು ನೀಡುವ ವರ್ಗಗಳು:

1) ಪರಿಶಿಷ್ಟ ಜಾತಿ, ಪಂಗಡ, ಅಲ್ಪಸಂಖ್ಯಾತರು, ಅಂಗವಿಕಲರು, ಮಹಿಳೆಯರು.

ಎ) ನಿರ್ವಹಿಸಬೇಕಾದ ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳು.

1) ಸರ್ಕಾರದ ಅಧಿಸೂಚನೆ ಸಂಖ್ಯೆ: ಆರ್‌ಡಿಪಿಆರ್/186(1)/ಎಂಜಿಎನ್‌ಆರ್‌ಇಜಿಎ 2011, ಬೆಂಗಳೂರು, ದಿನಾಂಕ:10-01-2012ರಲ್ಲಿ ರಾಜ್ಯ ಸಂಪನ್ಮೂಲ ವ್ಯಕ್ತಿಗಳಿಗೆ ಗುರುತಿಸಿದ ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳು.
2) ಕೇಂದ್ರ ಸರ್ಕಾರದ ಕಾಯ್ದೆ, ನಿಯಮಗಳು ಮತ್ತು ಮಾರ್ಗಸೂಚಿ ಪ್ರಕಾರ ಕರ್ತವ್ಯಗಳು.
3) ಸಾಮಾಜಿಕ ಪರಿಶೋಧನೆಯ ಮೂಲತತ್ವ ಪಾರದರ್ಶಕತೆ ಮತ್ತು ಉತ್ತರದಾಯಿತ್ವದ ನೀತಿಗೆ ಹಾಗೂ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಕ್ರಿಯಾಶೀಲವಾಗಿ ತೊಡಗಿಸಿಕೊಳ್ಳಲು ಬದ್ಧರಾಗಿರುವುದು.
4) ಆಯ್ಕೆಯಾದವರು ಸಾಮಾಜಿಕ ಪರಿಶೋಧನಾ ಸಂಸ್ಥೆಯ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಕೆಲಸ ನಿರ್ವಹಿಸಬೇಕಾಗಿರುತ್ತದೆ. ನಿರ್ದೇಶನಾಲಯದ ಷರತ್ತು ಮತ್ತು ನಿಬಂಧನೆಗಳ ಸಲಹಾ ಸೇವಾ ಒಪ್ಪಂದ ಪತ್ರದನ್ವಯ ಕಾರ್ಯನಿರ್ವಹಿಸಲು ಬದ್ಧರಾಗಿರುವುದು.
5) ಪ್ರಕಟಣೆಯನುಸಾರ ಹೊರಗುತ್ತಿಗೆ ಸಂಸ್ಥೆಯ ಮೂಲಕ (ಈ ಕೆಳಗಿನ) ಸ್ವೀಕೃತವಾಗುವ ಅರ್ಜಿಗಳನ್ನು ಪರಿಶೀಲಿಸಿ ರಾಜ್ಯಮಟ್ಟದ ಆಯ್ಕೆ ಸಮಿತಿಯು ಸಂಕ್ಷೇಪಿತ ಪಟ್ಟಿಯನ್ನಾಧರಿಸಿ ನಿಗದಿತ ದಿನಾಂಕದಂದು ಅಭ್ಯರ್ಥಿಗಳ ಸಂದರ್ಶನದ ಮೂಲಕ ಹುದ್ದೆಗಾಗಿ ಆಯ್ಕೆ ಮಾಡಲಾಗುವುದು.

**"ಮೆ॥ ಮೇಘಾ ಸರ್ವಿಸಸ್ ಬ್ಯೂರೋ,**
**ಮಾನವ ಸಂಪನ್ಮೂಲ ಏಜೆನ್ಸಿ,**
**ಸಹಕಾರ ಕಟ್ಟಡ,**
**ಬಸ್ ಸ್ಟಾಂಡ್ ಎದುರು,**
**ಬಿಜಾಪುರ".**

6) ಅರ್ಜಿ ಸಲ್ಲಿಸಬೇಕಾದ ವಿಳಾಸ: ಮೆ॥ ಮೇಘಾ ಸರ್ವಿಸಸ್ ಬ್ಯೂರೋ, c/o ಶ್ರೀ.ಎಲ್.ಪಿ. ತಿಪ್ಪನಗೌಡರ್, ಕೆ.ಸಿ.ಸಿ.ಎಫ್ ಅತಿಥಿ ಗೃಹದ ಹತ್ತಿರ, ಸಂ:4, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560018. ದೂರವಾಣಿ ಸಂಖ್ಯೆ:9901234325/9886501172.

ಏ) ಪ್ರಸ್ತುತ ನಿಗದಿಪಡಿಸಲಾಗಿರುವ ಮಾಸಿಕ ಗೌರವ ಸಂಭಾವನೆ ರೂ. 30,000/- ಇರುತ್ತದೆ, ನಿಯಮಾನುಸಾರ ಪ್ರವಾಸ ಭತ್ಯೆ ಮತ್ತು ಸಂಸ್ಥೆಯು ಕಾಲಕಾಲಕ್ಕೆ ನೀಡುವ ಸೌಕರ್ಯ/ಸೌಲಭ್ಯಗಳು.

ಸಾಮಾಜಿಕ ಪರಿಶೋಧನಾ ಸಂಸ್ಥೆಯಲ್ಲಿ ರಾಜ್ಯ ಸಂಪನ್ಮೂಲ ವ್ಯಕ್ತಿಗಳು ಕಾರ್ಯನಿರ್ವಹಿಸಲು ಆಸಕ್ತಿ ಹೊಂದಿರುವ ಅರ್ಹ ಅಭ್ಯರ್ಥಿಗಳು ಲಗತ್ತಿಸಿರುವ ನಿಗಧಿತ ನಮೂನೆಯಲ್ಲಿ ಭರ್ತಿ ಮಾಡಿದ ಅರ್ಜಿಯನ್ನು ಅವಶ್ಯಕ ಪೂರಕ ದಾಖಲೆಗಳೊಂದಿಗೆ ಮೊಹರಾದ ಲಕೋಟೆಯಲ್ಲಿರಿಸಿ, ಲಕೋಟೆ ಮೇಲೆ ರಾಜ್ಯ ಸಂಪನ್ಮೂಲ ವ್ಯಕ್ತಿಗಳ ಹುದ್ದೆಗೆ ಅರ್ಜಿಯೆಂದು ನಮೂದಿಸಿ ಸಲ್ಲಿಸುವುದು.

ನೇಮಕಾತಿ ವೇಳಾಪಟ್ಟಿ ಈ ಕೆಳಕಂಡಂತೆ ಇರುತ್ತದೆ. —

| ಕ್ರ.ಸಂ | ವಿವರ | ದಿನಾಂಕ | ಷರಾ |
|---|---|---|---|
| 1. | ಅರ್ಜಿ ಪ್ರಕಟಣೆ | 20-09-2014 | |
| 2. | ಆಯ್ಕೆ ಸಮಿತಿ ರಚನೆ ಬಗ್ಗೆ ಪ್ರಕಟಣೆ | 20-09-2014 | |
| 3. | ಪೂರಕ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸುವ ಅಂತಿಮ ದಿನಾಂಕ | 13-10-2014 | ಅರ್ಜಿ ಸಲ್ಲಿಸಲು ಯಾವುದೇ ಶುಲ್ಕ ಇರುವುದಿಲ್ಲ ಅವಧಿಮೀರಿದ ಅರ್ಜಿ ಪರಿಗಣಿಸಲಾಗುವುದಿಲ್ಲ ಅಂಚೆ ವಿಳಂಬಕ್ಕೆ ಇಲಾಖೆ ಹೊಣೆಗಾರರಲ್ಲ. |
| 4. | ಅಭ್ಯರ್ಥಿಗಳ ಪಟ್ಟಿ ಸಂಕ್ಷೇಪಿತಗೊಳಸುವಿಕೆ | 18-10-2014 | |
| 5. | ಸಂಕ್ಷೇಪಿತಗೊಳಸಿದ ಪಟ್ಟಿ ಪ್ರಕಟಣೆ | 25-10-2014 | |
| 6. | ಸಂದರ್ಶನ | 30-10-2014 | ಸಂಕ್ಷೇಪಿತಗೊಳಸಿದ ಅರ್ಜಿಗಳ ಪಟ್ಟಿ ವೆಬ್ ಸೈಟ್ (http://www.rdpr.kar.nic.in/social audit.asp) ಪ್ರಕಟಣೆ ಪರಿಶೀಲಿಸಿ ಸಂದರ್ಶನಕ್ಕೆ ನೇರವಾಗಿ ಹಾಜರಾಗಲು ಅಭ್ಯರ್ಥಿಗಳ ಹೊಣೆ. |
| 7. | ಸಿಬ್ಬಂದಿಗಳ ನೇಮಕಾತಿ ಆದೇಶ ಹೊರಡಿಸುವುದು | 12-11-2014 | |
| 8. | ಅರ್ಜಿ ಸಂಗ್ರಹಿಸುವ ಸಂಸ್ಥೆ ಹೆಸರು ಮತ್ತು ವಿಳಾಸ | "ಮೆ॥ ಮೇಘಾ ಸರ್ವಿಸಸ್ ಬ್ಯೂರೋ, c/o ಶ್ರೀ.ಎಲ್.ಪಿ. ತಿಪ್ಪನಗೌಡರ್, ಕೆ.ಸಿ.ಸಿ.ಎಫ್ ಅತಿಥಿ ಗೃಹದ ಹತ್ತಿರ, ಸಂ:4, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560018. ದೂರವಾಣಿ ಸಂಖ್ಯೆ: 9901234325/ 9886501172 | |

—

**ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯದಲ್ಲಿ (ಮಹಾತ್ಮಗಾಂಧಿ ನರೇಗಾ), ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು ಇಲ್ಲಿ ರಾಜ್ಯ ಸಂಪನ್ಮೂಲ ವ್ಯಕ್ತಿ ಹುದ್ದೆ ನೇಮಕಾತಿಗಾಗಿ ಅರ್ಜಿ ನಮೂನೆ.**

| | | | |
|---|---|---|---|
| 1. | ಅರ್ಜಿದಾರರ ಹೆಸರು | : | |
| 2. | ಹುಟ್ಟಿದ ದಿನಾಂಕ ಮತ್ತು ವಯಸ್ಸು {ಧೃಡೀಕೃತ ದಾಖಲೆ ಲಗತ್ತಿಸುವುದು} | : | |
| 3. | ಅ) ಶೈಕ್ಷಣಿಕ ವಿದ್ಯಾರ್ಹತೆ {ಸ್ನಾತಕೋತ್ತರ ಪದವಿ ಧೃಡೀಕೃತ ದಾಖಲೆಗಳನ್ನು ಲಗತ್ತಿಸುವುದು}<br>ಆ) ಕಂಪ್ಯೂಟರ್ ಪರಿಜ್ಞಾನ {ಧೃಡೀಕರಣ ಪ್ರತಿ ಲಗತ್ತಿಸುವುದು} | : | |
| 4. | ಅಂಚೆ ವಿಳಾಸ | : | |
| 5. | ಸ್ಥಿರ ದೂರವಾಣಿ/ಮೊಬೈಲ್ ಸಂಖ್ಯೆ, ಇ-ಮೇಲ್ ವಿಳಾಸ | : | |
| 6. | ದೈಹಿಕ ಸಾಮರ್ಥ್ಯ {ಧೃಡೀಕೃತ ಪ್ರತಿ ಲಗತ್ತಿಸುವುದು} | : | |
| 7. | ಅನುಭವದ ಅರ್ಹತೆಗಳು:-<br>1. ಸಾಮಾಜಿಕ ಪರಿಶೋಧನೆ ನಿರ್ವಹಿಸಿದ ಅನುಭವ.<br>2. ಸ್ವಯಂ ಸೇವಾ ಸಂಘ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸಿದ ಅನುಭವ.<br>3. ನರೇಗಾ ಕಾರ್ಯಕ್ರಮದ ಅನುಭವ.<br>{ಧೃಡೀಕೃತ ಪ್ರತಿ ಲಗತ್ತಿಸುವುದು} | : | |
| 8. | ಆದ್ಯತೆ ಪರಿಗಣಿಸಲು ಪೂರಕ ದಾಖಲೆಗಳು<br>ಪರಿಶಿಷ್ಟ ಜಾತಿ/ಪಂಗಡ, ಅಲ್ಪಸಂಖ್ಯಾತರು, ಅಂಗವಿಕಲರು. | : | |
| 9. | Weightage ಪರಿಗಣಿಸಲು ಪೂರಕ ದಾಖಲೆಗಳು – ಜಿಲ್ಲಾ ಸಾಮಾಜಿಕ ಪರಿಶೋಧನಾ ಸಂಯೋಜಕರಿಗೆ ಪ್ರತಿ ವರ್ಷಕ್ಕೆ 02 ಅಂಕಗಳು ಗರಿಷ್ಟ 8 ಅಂಕಗಳು. | : | |
| 10. | ಹಾಲಿ ನಿರ್ವಹಿಸುತ್ತಿರುವ ಉದ್ಯೋಗದ ವಿವರ | : | |
| 11. | ನಿರ್ದೇಶನಾಲಯದ ಷರತ್ತು ಮತ್ತು ನಿಬಂಧನೆಗಳ ಇಲಾಖಾ ಸೇವಾ ಒಪ್ಪಂದಕ್ಕೆ ಸಹಿ ಹಾಕಲು ಒಪ್ಪಿಗೆ ಇದೆಯೆ? | : | |

ಸ್ಥಳ:

ಅಭ್ಯರ್ಥಿಯ ಸಹಿ

ದಿನಾಂಕ: